**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

ದಿನಾಂಕ:28.06.2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ** ಃಅರ್ಜಿದಾರರ ಪರ **ವಕೀಲರಿಂದಃ**

ನಾನು ಈ ವ್ಯವಹರಣೆಯಲ್ಲಿ ಅರ್ಜಿದಾರರ ಪರ ಸಾಕ್ಷಿಯಾಗಿದ್ದು ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಸಾಕ್ಯವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತವೆ.

ನಾನು ಆಥರೈಜೇಷನ್ ಲೆಟರನ್ನು ಹಾಜರುಪಡಿಸಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯಿತು. ನಾನು ನಿಪಿ-9 ರಂತೆ ಸರ್ವೀಸ್ ಎಸ್ಟಿಮೇಷನ್ ನ್ನು ನೀಡಿರುತ್ತೇನೆ. ಸಾಕ್ಷಿಯು ನಿಪಿ-9 ರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-9 ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲು ಃ ಎದುರುದಾರರ ಪರಃ ಶ್ರೀ ಎಸ್ ಪಿ ಕೆ ವಕೀಲರಿಂದಃ

ನಮ್ಮ ಶೋ ರೂಮ್ ನಲ್ಲಿ 14 ಜನ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಇರುತ್ತೇವೆ. ನಮ್ಮ ಬ್ರಾಂಚ್ ನಲ್ಲಿ ಮ್ಯಾನೆಜರ್ ಇಲ್ಲ. ಮಂಗಳೂರಿನಲ್ಲಿರುತ್ತಾರೆ. ಮ್ಯಾನೆಜರ್ ಪ್ರಭಾರವನ್ನು ನನಗೆ ವಹಿಸಿಕೊಟ್ಟಿದ್ದಾರೆ. ನನಗೆ ಪ್ರಭಾರ ವಹಿಸಿಕೊಟ್ಟಿರುವ ಬಗ್ಗೆ ದಾಖಲೆ ಇರುವುದಿಲ್ಲ. ಆದಕಾರಣ ಯಾವುದೇ ವ್ಯವಹಾರ ಹಾಗೂ ದಾಖಲೆಗಳ ಸಂಬಂಧ ಫೈನಲ್ ಮಾಡಬೇಕಾದರೆ ಮ್ಯಾನೇಜರ್ ಗಮನಕ್ಕೆ ತಂದು ಮಾಡಬೇಕಾಗುತ್ತದೆಂದರೆ ಸರಿ. ಸಾಕ್ಷಿ ಮುಂದುವರಿದು ನಮ್ಮ ಶಾಖೆಗೆ ಸಂಬಂಧಿಸಿದಂತೆ ನಾನೇ ವ್ಯವಹಾರಗಳನ್ನು ಹಾಗೂ ದಾಖಲೆಗಳನ್ನು ಫೈನಲ್ ಮಾಡುತ್ತೇನೆಂದು ನುಡಿಯುತ್ತಾರೆ.

2. ವಾಹನ ನಾನು ಎಸ್ಟಿಮೇಷನ್ ನೀಡಿರುವ 2 ದಿನಗಳ ಮೊದಲು ನಮ್ಮ ಶೋ ರೂಮ್ ಗೆ ರಿಪೇರಿಗಾಗಿ ಬಂದಿತ್ತು. ರಿಪೇರಿಗಾಗಿ ಬಂದಿದ್ದ ವಾಹನ 3 ದಿನಗಳ ಕಾಲ ನಮ್ಮ ಗ್ಯಾರೇಜ್ನಲ್ಲಿ ಇತ್ತು. ಎಸ್ಟಿಮೇಷನ್ ನ್ನು ಖುದ್ದು ನಾನೇ ಮಾಡಿದ್ದೇನೆ. ಎಸ್ಟಿಮೇಷನ್ ಮಾಡುವ

This is a True Copy of the Court Records Online. Authenticated @ districts.ecourtsindia.com/cnr/KADK310007262023/truecopy/order-3.pdf

www.ecourtsindia.com

ಮುಂಚೆ ವಾಹನದ ದಾಖಲೆಗಳನ್ನು ನೋಡಿದ್ದೆ. ವಾಹನ 2015 ನೇ ಮಾಡೆಲ್ನದು. ಎಸ್ಟಿಮೇಷನ್ ನೀಡುವ ಮೊದಲು ಸುಮಾರು ಬಾರಿ ನಮ್ಮ ಶೋ ರೂಮ್‌ಗೆ ಸರ್ವೀಸ್ಸಾಗಿ ವಾಹನ ಬಂದಿರುತ್ತದೆ. ಅದರ ಸ್ಪೇರ್ ಪಾರ್ಟ್ಗಳನ್ನು ಎಷ್ಟು ಬಾರಿ ಬದಲಾವಣೆ ಮಾಡಲಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ. ವಾಹನವನ್ನು ರಿಪೇರಿ ಮಾಡಲು ಆಗುವುದೇ ಇಲ್ಲ ಎಂದು ನಾನು ವರದಿ ಕೊಟ್ಟಿಲ್ಲ. ಸದರಿ ವಾಹನದ ಐ ಡಿ ವಿ ಎಷ್ಟು ಇತ್ತು ಎಂದು ನೆನಪಿಲ್ಲ. ಸಾಕ್ಷಿ ದಾಖಲೆ ನೋಡಿ ಸದರಿ ವಾಹನದ ಐ ಡಿ ವಿ ವ್ಯಾಲ್ಯು 44,600/-ರೂ. ಗಳು ಎಂದು ನುಡಿಯುತ್ತಾರೆ. ಸದರಿ 44,600/-ರೂ. ಗಳಿಗೆ ವಾಹನದ ಪಾಲಿಸಿ ಕವರೇಜ್ ಇರುತ್ತದೆ. ಇನ್ಸ್ಯುರೆನ್ಸ್ ಸಂಸ್ಥೆಯಿಂದ ಅರ್ಜಿದಾರರು ಕ್ಲೇಮು ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಮಾರುಕಟ್ಟೆ ಮೌಲ್ಯದ ಆಧಾರಿತವಾಗಿ ಅರ್ಜಿದಾರರ ವಾಹನ 80 ಸಾವಿರ ಇರಬಹುದು ಎಂದು ತಿಳಿಸಿದ್ದೇನೆ. 2015 ರಲ್ಲಿ ವಾಹನದ ಮೌಲ್ಯ 1,96,000/- ಇತ್ತು. ವಾಹನಕ್ಕೆ ವರ್ಷ ವರ್ಷ ಎಷ್ಟು ಡಿಪ್ರಿಸಿಯೇಷನ್ ಆಗುತ್ತದೆಂದು ನನಗೆ ಗೊತ್ತಿಲ್ಲ. ಸ್ಕ್ರ್ಯಾಪ್ ಗೆ ತೆಗೆದುಕೊಳ್ಳುವ ವ್ಯಕ್ತಿಗಳು ಒಂದು ವಾಹನಕ್ಕೆ ತೋರಿಸುವ ಮೌಲ್ಯವೇ ಅಂತಿಮ ಎಂದರೆ ಸರಿ. ಆದಕಾರಣ ನಾನು ಪ್ರಮಾಣಪತ್ರಿಕೆಯಲ್ಲಿ ತೋರಿಸಿರುವ ಮಾರುಕಟ್ಟೆ ಮೌಲ್ಯ ಸರಿಯಿಲ್ಲ ಎಂದರೆ ಸರಿಯಲ್ಲ. ವಾಹನ ರಿಪೇರಿಯಾಗುವ ಸ್ಥಿತಿಯಲ್ಲಿದ್ದರೂ ಕೂಡಾ ಸ್ಕ್ರ್ಯಾಪ್ ಗೆ ಹಾಕಬೇಕು ಎಂದು ವರದಿ ನೀಡಿದ್ದೇನೆ ಎಂದರೆ ಸಾಕ್ಷಿಯು ನಾನು ವರದಿ ನೀಡಿಲ್ಲ ಎಂದು ನುಡಿಯುತ್ತಾರೆ. ನಾವು ಕೇಳಿದ ಮೊತ್ತವನ್ನು ಕೊಡಲು ವಾಹನದ ಮಾಲಿಕರು ಒಪ್ಪದ ಕಾರಣ ವಾಹನ ರಿಪೇರಿ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು

This is a True Copy of the Court Records Online. Authenticated @ districts.ecourtsindia.com/cnr/KADK310007262023/truecopy/order-3.pdf

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KADK310007262023/truecopy/order-3.pdf

www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com